2018 ಕ.ತೀ.ವ. 957

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್**
**ಹಾಗೂ**
**ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಕೆ.ಎಸ್. ಮುದಗಲ್**

**ವಿ. ಗೋವಿಂದ ರಾಜು ಮತ್ತು ಮತ್ತೊಬ್ಬರು**
**-ವಿರುದ್ಧ- ಯಾರೂ ಇಲ್ಲ***

**ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925ರ 299ನೇ ಪ್ರಕರಣದ ಮೇರೆಗಿನ ಸಂಕೀರ್ಣ ಮೊದಲ ಅಪೀಲು.**

**ಈ ಅಪೀಲನ್ನು, ಊರ್ಜಿತವಾಗುವುದಿಲ್ಲವೆಂದು ದಿನಾಂಕ 05.06.2015ರಂದು ಉಯಿಲಿನ ಸಂಬಂಧದಲ್ಲಿ ಪ್ರೋಬೇಟ್ ಅನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925 (ಅಧಿನಿಯಮ)ದ 276ರ ಪ್ರಕರಣದಡಿಯಲ್ಲಿ ಸಲ್ಲಿಸಿದ ಪಿ ಹಾಗೂ ಎಸ್.ಸಿ. ಸಂಖ್ಯೆ: 305/2016ರಲ್ಲಿನ ಅರ್ಜಿದಾರರ ಅರ್ಜಿಯನ್ನು ವಜಾಗೊಳಿಸಿ XXXIXನೇ ಹೆಚ್ಚುವರಿ ನಗರ ಸಿವಿಲ್ ಹಾಗೂ ಸತ್ರ ನ್ಯಾಯಾಲಯಗಳ ನ್ಯಾಯಾಧೀಶರ ನ್ಯಾಯಾಲಯವು ಹೊರಡಿಸಿದ ದಿನಾಂಕ 28.02.2017ರಂದಿನ ಆದೇಶದ ವಿರುದ್ಧ ನಿರ್ದೇಶಿಸಲಾಗಿರುತ್ತದೆ.**

**ಒಬ್ಬ ಹಿಂದೂ ಉಯಿಲನ್ನು ಬರೆದಿದ್ದಲ್ಲಿ, ಅಧಿನಿಯಮದ 57ನೇ ಪ್ರಕರಣದ (ಎ) ಹಾಗೂ (ಬಿ) ಖಂಡಗಳು ಒಳಗೊಳ್ಳುವುದಿಲ್ಲ. ಅಂಥ ಉಯಿಲಿಗೆ ಅಧಿನಿಯಮದ 213(1) ಪ್ರಕರಣದ ಅನ್ವಯನದ ಪ್ರಶ್ನೆ**

* ಸಂಕೀರ್ಣ ಮೊದಲ ಅಪೀಲು ಸಂಖ್ಯೆ: 3726/2017 (ಐಎಸ್ಎ),
ದಿನಾಂಕ: 18ನೇ ಸೆಪ್ಟೆಂಬರ್, 2017.

**ಉದ್ಭವವಾಗುವುದಿಲ್ಲ. ಆದಾಗ್ಯೂ, ಅಂಥ ಸಂದರ್ಭದಲ್ಲಿ, ಪ್ರೊಬೇಟ್‌ನ್ನು ನೀಡುವುದಕ್ಕೆ ಯಾವುದೇ ನಿಷೇಧ ಅನ್ವಯವಾಗುವುದಿಲ್ಲ ಹಾಗೂ ಅಧಿನಿಯಮದ 213ನೇ ಪ್ರಕರಣವು, ಉಯಿಲಿನ ಪ್ರೊಬೇಟನ್ನು ಪಡೆಯಲು ಲೆಗೆಟೀಯನ್ನು ನಿಷೇಧಿಸುವುದಿಲ್ಲ. ಹಾಗಾಗಿ, ಊರ್ಜಿತವಾಗುವುದಿಲ್ಲವೆಂದು ಅರ್ಜಿಯನ್ನು ವಜಾ ಮಾಡಿರುವ ಅಧಿವಿಚಾರಣಾ ನ್ಯಾಯಾಲಯವು ಹೇಳಿರುವ ಕಾರಣಗಳು ಸರಿಯಾದವುಗಳಾಗಿರುವುದಿಲ್ಲ. ದಿನಾಂಕ 28.02.2017ರ ಪ್ರಶ್ನಿತ ಆದೇಶವನ್ನು ತದನುಸಾರವಾಗಿ ರದ್ದುಗೊಳಿಸಿ, ವಿಷಯವನ್ನು ಕಾನೂನಿಗನುಸಾರವಾಗಿ ಮರು ಪರಿಗಣಿಸಲು ಅಧಿವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಲಾಗಿರುತ್ತದೆ.**

**ಅಪೀಲನ್ನು ವಿಲೆಗೊಳಿಸಿದೆ.**

***ಉಲ್ಲೇಖಿಸಲಾದ ಮೊಕದ್ದಮೆ:*** **ಪ್ಯಾರಾದಲ್ಲಿ**

*1. (2005) 12 ಎಸ್‌ಸಿಸಿ 503*
*ಬಲ್‌ಬಿರ್ ಸಿಂಗ್ ವಸು –ವಿರುದ್ಧ– ಲಕ್ಬೀರ್ ಸಿಂಗ್ (ಉಲ್ಲೇ) 4*

ಅರ್ಜಿದಾರರ ಪರ : ಶ್ರೀ ಅನಿಲ್ ಶೇಖರ್ ಕೆ.ಎಸ್., ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಎಚ್.ಜಿ. ರಮೇಶ್ (ಮೌಖಿಕ):**

ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925, ಅಧಿನಿಯಮದ 57ನೇ ಪ್ರಕರಣದ (ಎ) ಹಾಗೂ (ಬಿ) ಖಂಡಗಳು ಒಳಗೊಳ್ಳದಿರುವ ಉಯಿಲಿಗೆ

ಪ್ರೊಬೇಟ್‌ನ್ನು ನೀಡುವುದನ್ನು ನಿಷೇಧಿಸುತ್ತದೆಯೇ? ಈ ಪ್ರಶ್ನೆಗೆ, ಈ ಅಪೀಲಿನಲ್ಲಿ ಉತ್ತರಿಸಬೇಕಾದ ಅವಶ್ಯಕತೆಯಿರುತ್ತದೆ. ಇದಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.

2. ಈ ಅಪೀಲನ್ನು, ಊರ್ಜಿತವಾಗುವುದಿಲ್ಲವೆಂದು ದಿನಾಂಕ 05.06.2015ರಂದು ಉಯಿಲಿನ ಸಂಬಂಧದಲ್ಲಿ ಪ್ರೊಬೇಟ್‌ಅನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925 (ಅಧಿನಿಯಮ)ದ 276ರ ಪ್ರಕರಣದಡಿಯಲ್ಲಿ ಸಲ್ಲಿಸಿದ ಪಿ ಹಾಗೂ ಎಸ್.ಸಿ. ಸಂಖ್ಯೆ: 305/2016ರಲ್ಲಿನ ಅರ್ಜಿದಾರರ ಅರ್ಜಿಯನ್ನು ವಜಾಗೊಳಿಸಿ XXXIXನೇ ಹೆಚ್ಚುವರಿ ನಗರ ಸಿವಿಲ್ ಹಾಗೂ ಸತ್ರ ನ್ಯಾಯಾಲಯಗಳ ನ್ಯಾಯಾಧೀಶರ ನ್ಯಾಯಾಲಯವು ಹೊರಡಿಸಿದ ದಿನಾಂಕ 28.02.2017ರಂದಿನ ಆದೇಶದ ವಿರುದ್ಧ ನಿರ್ದೇಶಿಸಲಾಗಿರುತ್ತದೆ.

3. ನಾವು ಅಪೀಲುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿ, ಪ್ರಶ್ನಿತ ಆದೇಶವನ್ನು ಪರಿಶೀಲಿಸಿರುತ್ತೇವೆ. ಪ್ರಶ್ನಿತ ಆದೇಶದ ಮೂಲಕ, ಅಧಿವಿಚಾರಣಾ ನ್ಯಾಯಾಲಯವು, ಅಧಿನಿಯಮದ 57ನೇ ಪ್ರಕರಣದ (ಎ) ಹಾಗೂ (ಬಿ) ಖಂಡಗಳು ಒಳಗೊಳ್ಳದ ಯಾರೇ ಹಿಂದುವಿನಿಂದ ಬರೆದುಕೊಡಲಾದ ಉಯಿಲಿಗೆ ಯಾವುದೇ ಪ್ರೊಬೇಟ್ ಅಗತ್ಯವಾಗಿರುವುದಿಲ್ಲವೆಂಬ ಆಧಾರದ ಮೇಲೆ ಅರ್ಜಿಯನ್ನು ವಜಾಗೊಳಿಸಿರುತ್ತದೆ.

4. ಅಪೀಲಿಗೆ ಪೂರಕವಾಗಿ ಅಪೀಲುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ***ಬಲ್‌ಬಿರ್ ಸಿಂಗ್ ವಸು -ವಿರುದ್ಧ- ಲಕ್ಬೀರ್ ಸಿಂಗ್***[1] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿರುತ್ತಾರೆ ಹಾಗೂ ಅದರಲ್ಲಿ ಹೇಳಿದ ಅಭಿಪ್ರಾಯಗಳನ್ನು ಈ ಮುಂದಿನಂತೆ ಉಲ್ಲೇಖಿಸಲಾಗಿರುತ್ತದೆ:

1. (2005) 12 ಎಸ್‌ಸಿಸಿ 503

> “5. ಅಪೀಲುದಾರರ ವಕೀಲರು, ಆಗ ಉತ್ತರಾಧಿಕಾರ ಅಧಿನಿಯಮದ 213ನೇ ಪ್ರಕರಣವು, ಕಲ್ಕತ್ತಾ, ಮದ್ರಾಸ್ ಹಾಗೂ ಬಾಂಬೆ ಪ್ರೆಸಿಡೆನ್ಸಿ ಪಟ್ಟಣಗಳ ಹೊರಗೆ ಅನ್ವಯವಾಗದಿರುವ ಉಯಿಲಿನಡಿಯಲ್ಲಿ ಈತನ ಕ್ಲೇಮನ್ನು ಸುಸ್ಥಾಪಿಸುವ ಮೊದಲು ಪ್ರೊಬೇಟ್‌ನ್ನು ಪಡೆಯುವುದಕ್ಕೆ ಕಾರ್ಯ ನಿರ್ವಾಹಕನನ್ನು ಅಗತ್ಯಪಡಿಸುತ್ತದೆ. ಇದೇ ಸರಿಯಾಗಿರುತ್ತದೆಂದು ಭಾವಿಸಿ, 213ನೇ ಪ್ರಕರಣದ ಮೂಲಕ ಒಳಗೊಳ್ಳದ ದೇಶದ ಇತರೆ ಭಾಗಗಳಲ್ಲಿನ ನ್ಯಾಯಾಲಯಗಳಿಗೆ ಈ ವಿವೇಕದ ಅಥವಾ ಅನುಕೂಲದ ವಿಷಯದಂತೆ ಪ್ರೊಬೇಟ್‌ಗೆ ಸಂಬಂಧಿಸಿದಂತೆ ಅನ್ವಯಿಸುವುದರಿಂದ ಎಕ್ಸಿಕ್ಯೂಟರ್ ಅನ್ನು ನಿಷೇಧಿಸುವಂತೆ 213ನೇ ಪ್ರಕರಣವನ್ನು ನಾವು ಓದಿರುವುದಿಲ್ಲ”.

5. ಉದ್ಭವವಾಗಿರುವ ಪ್ರಶ್ನೆಯ ಸಂದರ್ಭದಲ್ಲಿ, ಅಧಿನಿಯಮದ 213ನೇ ಪ್ರಕರಣವನ್ನು ಉಲ್ಲೇಖಿಸುವುದು ಸಮುಚಿತವಾದುದಾಗಿರುತ್ತದೆ:

> **“213. ನಿರ್ವಾಹಕ ಅಥವಾ ಲೆಗಟೀಯಾಗಿ ಯಾವಾಗ ಹಕ್ಕು ಸ್ಥಾಪಿತವಾಗುತ್ತದೆ.–** (1) ನಿರ್ವಾಹಕ ಅಥವಾ ಲೆಗಟಿಯಾಗಿ ಯಾವುದೇ ಹಕ್ಕನ್ನು, ಭಾರತದಲ್ಲಿ ಸಕ್ಷಮ ಅಧಿಕಾರ ವ್ಯಾಪ್ತಿ ಹೊಂದಿರುವ ನ್ಯಾಯಾಲಯವು ಯಾವ ಉಯಿಲಿನ ಪ್ರೊಬೇಟಿನ ಹಕ್ಕನ್ನು ಕ್ಲೇಮು ಮಾಡಲಾಗಿದೆಯೋ ಆ ಉಯಿಲಿನ ಪ್ರೊಬೇಟನ್ನು ನೀಡಿದ್ದ ಹೊರತು ಅಥವಾ ಉಯಿಲು ಅಥವಾ ಉಯಿಲಿನ ಅಧಿಪ್ರಮಾಣಿತ ಪ್ರತಿಯನ್ನು ಲಗತ್ತಿಸಿ ಆಡಳಿತ ಅಧಿಕಾರ ಪತ್ರವನ್ನು ನೀಡಿದ್ದ ಹೊರತು, ಸ್ಥಾಪಿಸಲು ಆಗುವುದಿಲ್ಲ.

(2) ಈ ಪ್ರಕರಣವು ಮಹಮದೀಯರು ಅಥವಾ ಭಾರತೀಯ ಕ್ರೈಸ್ತರು ಮಾಡಿದ ಉಯಿಲುಗಳ ಸಂದರ್ಭದಲ್ಲಿ ಅನ್ವಯವಾಗತಕ್ಕುದಲ್ಲ, ಮತ್ತು -

(i) ಹಿಂದು, ಬೌದ್ಧ, ಸಿಖ್ ಅಥವಾ ಜೈನನು ಮಾಡಿದ ಉಯಿಲುಗಳ ಸಂದರ್ಭದಲ್ಲಿ ಅಂಥ ಉಯಿಲುಗಳು 57ನೇ ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವರ್ಗಗಳಿಗೆ, ಮತ್ತು

(ii) ಭಾರತ ಉತ್ತರಾಧಿಕಾರ (ತಿದ್ದುಪಡಿ) ಅಧಿನಿಯಮ, 1962ರ (1962 ರ 16) ಪ್ರಾರಂಭದ ತರುವಾಯ ಮರಣ ಹೊಂದಿದ ಯಾವನೇ ಪಾರ್ಸಿಯು ಮಾಡಿದ ಉಯಿಲುಗಳ ಸಂದರ್ಭಗಳಲ್ಲಿ, ಅಂಥ ಉಯಿಲುಗಳನ್ನು, ಕಲ್ಕತ್ತ, ಮದ್ರಾಸು ಮತ್ತು ಮುಂಬಯಿ ಉಚ್ಚ ನ್ಯಾಯಾಲಯಗಳ ಸಾಮಾನ್ಯ ಅಸಲು ಸಿವಿಲ್ ಅಧಿಕಾರ ವ್ಯಾಪ್ತಿಯ ಸ್ಥಳೀಯ ಮಿತಿಗಳಲ್ಲಿ ಮಾಡಿರುವಲ್ಲಿ ಅನ್ವಯವಾಗತಕ್ಕುದು ಮತ್ತು ಅಂಥ ಉಯಿಲುಗಳನ್ನು ಆ ಪರಿಮಿತಿಗಳ ಹೊರಗೆ ಮಾಡಿದ್ದರೆ, ಆ ಪರಿಮಿತಿಯೊಳಗೆ ಇರುವ ಸ್ಥಿರ ಸ್ವತ್ತಿಗೆ ಅವು ಸಂಬಂಧಪಡುವಷ್ಟರ ಮಟ್ಟಿಗೆ ಮಾತ್ರ ಅನ್ವಯವಾಗತಕ್ಕುದು.

6. ಒಬ್ಬ ಹಿಂದೂ ಉಯಿಲನ್ನು ಬರೆದಿದ್ದಲ್ಲಿ, ಅಧಿನಿಯಮದ 57ನೇ ಪ್ರಕರಣದ (ಎ) ಹಾಗೂ (ಬಿ) ಖಂಡಗಳು ಒಳಗೊಳ್ಳುವುದಿಲ್ಲ. ಅಂಥ ಉಯಿಲಿಗೆ ಅಧಿನಿಯಮದ 213(1) ಪ್ರಕರಣದ ಅನ್ವಯನದ ಪ್ರಶ್ನೆ ಉದ್ಭವವಾಗುವುದಿಲ್ಲ. ಆದಾಗ್ಯೂ, ಅಂಥ ಸಂದರ್ಭದಲ್ಲಿ, ಪ್ರೊಬೇಟ್‌ನ್ನು ನೀಡುವುದಕ್ಕೆ ಯಾವುದೇ ನಿಷೇಧ ಅನ್ವಯವಾಗುವುದಿಲ್ಲ ಹಾಗೂ ಅಧಿನಿಯಮದ 213ನೇ ಪ್ರಕರಣವು,

ಉಯಿಲಿನ ಪ್ರೊಬೇಟನ್ನು ಪಡೆಯಲು ಲೆಗೆಟಿಯನ್ನು ನಿಷೇದಿಸುವುದಿಲ್ಲ. ಹಾಗಾಗಿ, ಊರ್ಜಿತವಾಗುವುದಿಲ್ಲವೆಂದು ಅರ್ಜಿಯನ್ನು ವಜಾ ಮಾಡಿರುವ ಅಧಿವಿಚಾರಣಾ ನ್ಯಾಯಾಲಯವು ಹೇಳಿರುವ ಕಾರಣಗಳು ಸರಿಯಾದವುಗಳಾಗಿರುವುದಿಲ್ಲ. ದಿನಾಂಕ: 28.02.2017ರ ಪ್ರಶ್ನಿತ ಆದೇಶವನ್ನು ತದನುಸಾರವಾಗಿ ರದ್ದುಗೊಳಿಸಿ, ವಿಷಯವನ್ನು ಕಾನೂನಿಗನುಸಾರವಾಗಿ ಮರು ಪರಿಗಣಿಸಲು ಅಧಿವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಲಾಗಿರುತ್ತದೆ.

ಅಪೀಲನ್ನು ವಿಲೆಗೊಳಿಸಿದೆ.